16

**ಕರ್ನಾಟಕ ಸರ್ಕಾರ**

ಕರ್ನಾಟಕ ಸರ್ಕಾರ ಸಚಿವಾಲಯ
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 17-11-2014.

ಸಂಖ್ಯೆ: ಯೋಇ 130 ಪ್ರಕಾ 2014

**ಸುತ್ತೋಲೆ**

ವಿಷಯ: ರಾಜ್ಯ ಯೋಜನಾ ಮಂಡಳಿಯ ರಚನೆಯ ಬಗ್ಗೆ
ಉಲ್ಲೇಖ: 1. ಸರ್ಕಾರಿ ಆದೇಶ ಸಂಖ್ಯೆ:ಪಿಡಿ 117 ಸಿಟಿ 93 ಬೆಂಗಳೂರು,
2. PD 39 SPB 2012(P1)
3. PD 25 SPB 2014

*****

ಮೇಲಿನ ಉಲ್ಲೇಖ(1)ರಲ್ಲಿ ತಿಳಿಸಿರುವಂತೆ ರಾಜ್ಯ ಯೋಜನಾ ಮಂಡಳಿಯನ್ನು ರಚಿಸಲಾಗಿದ್ದು, ಕಾಲಕಾಲಕ್ಕೆ ಮುಂದುವರೆಸಲಾಗುತ್ತಿದೆ. ರಾಜ್ಯ ಯೋಜನಾ ಮಂಡಳಿಯು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುವ ಸಲುವಾಗಿ ಕೆಲವು ಸೂಚನೆಗಳನ್ನು ನೀಡುವ ಅವಶ್ಯಕತೆ ಇರುತ್ತದೆ. ರಾಜ್ಯ ಯೋಜನಾ ಮಂಡಳಿಯ ಪುನರ್‌ರಚನೆಗೆ ಸಂಬಂಧಪಟ್ಟಂತೆ ಒಂದು ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಈ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ನಿರ್ದೇಶಿಸಿದೆ.

ರಾಜ್ಯ ಯೋಜನಾ ಮಂಡಳಿಯು ಸರ್ಕಾರದ ಒಂದು ಅಂಗವಾಗಿದೆ. ಈ ಮಂಡಳಿಯು ಯೋಜನಾ ಇಲಾಖೆ ಹಾಗೂ ಇತರ ಇಲಾಖೆಗಳೊಂದಿಗೆ ಸಲಹಾರೂಪದಲ್ಲಿ ಕಾರ್ಯನಿರ್ವಹಿಸಬೇಕಾಗಿದೆ. ಮಂಡಳಿಯು ತಜ್ಞರು ಮತ್ತು ವಿಶೇಷ ಪರಿಣಿತರನ್ನು ಹೊಂದಿರುವುದರಿಂದ ವಿಶೇಷ ಜ್ಞಾನವನ್ನು ಸರ್ಕಾರದೊಂದಿಗೆ ಹಂಚಿಕೊಂಡಲ್ಲಿ, ಮಧ್ಯಮಾವಧಿ ಮತ್ತು ದೀರ್ಘಾವಧಿಯ ನೀತಿ ನಿರೂಪಣೆಗೆ ಅನುಕೂಲವಾಗುತ್ತದೆ. ಈ ದಿಕ್ಕಿನಲ್ಲಿ ಮಂಡಳಿಯ ಸಲಹೆಗಳು ಅಮೂಲ್ಯವಾಗುತ್ತದೆ.

ಈ ನಿಟ್ಟಿನಲ್ಲಿ ರಾಜ್ಯ ಯೋಜನಾ ಮಂಡಳಿಯು ಉಲ್ಲೇಖ (1) ರಲ್ಲಿ ಸ್ಪಷ್ಟಪಡಿಸಿರುವ ಕಾರ್ಯಗಳೊಂದಿಗೆ ಈ ಕೆಳಕಂಡ ಕಾರ್ಯಗಳನ್ನು ಸಹ ನಿರ್ವಹಿಸಬೇಕಾಗುತ್ತದೆ:

1. ಮಾನವ ಹಾಗೂ ನೈಸರ್ಗಿಕ ಸಂಪನ್ಮೂಲಗಳ ಅತ್ಯುತ್ತಮ ಬಳಕೆಗಾಗಿ ನೀತಿ ನಿರೂಪಿಸುವ ಬಗ್ಗೆ ಸಲಹೆ ನೀಡುವುದು.
2. ಕಾರ್ಯಕ್ರಮಗಳ ವೆಚ್ಚದಲ್ಲಿನ ದಕ್ಷತೆ ಮತ್ತು ಅದರಿಂದಾಗುವ ಉಪಯುಕ್ತತೆ ಕುರಿತಂತೆ ಅಧ್ಯಯಿಸುವುದು.
3. ರಾಜ್ಯದ ಆರ್ಥಿಕ ಸ್ಥಿತಿಯ ಅಧ್ಯಯನ ಮಾಡಿ ಆವರ್ತಕ (Periodic) ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸುವುದು.

ಯೋಜನಾ ಕಾರ್ಯಕ್ರಮಗಳ ಪರಾಮರ್ಶನೆ ಹಾಗೂ ಅವುಗಳನ್ನು ಸರಿಪಡಿಸುವ ಕ್ರಮ ಜರುಗಿಸಲು ಈಗಾಗಲೇ ಹಲವಾರು ಮಟ್ಟಗಳಲ್ಲಿ ಸಮಿತಿಗಳನ್ನು ರಚಿಸಿದ್ದು, ಪರಾಮರ್ಶೆ ಕಾರ್ಯ ನಡೆಯುತ್ತಿರುವುದರಿಂದ ರಾಜ್ಯ ಯೋಜನಾ ಮಂಡಳಿಯಿಂದ ಮರುಪರಾಮರ್ಶನೆ ಕೈಗೊಳ್ಳುವ ಅಗತ್ಯವಿರುವುದಿಲ್ಲ.

ರಾಜ್ಯ ಯೋಜನಾ ಮಂಡಳಿಗೆ ವಹಿಸಿರುವ ಕಾರ್ಯಗಳನ್ನು ಪರಿಣಾಮಕಾರಿಯಾಗಿ ಕೈಗೊಳ್ಳುವ ನಿಟ್ಟಿನಲ್ಲಿ ರಾಜ್ಯ ಹಾಗೂ ಜಿಲ್ಲಾ ಮಟ್ಟಗಳಲ್ಲಿ ಇಲಾಖೆಗಳ ಕಾರ್ಯಕ್ರಮಗಳ ಅನುಷ್ಠಾನ ಕುರಿತು ಮಾಹಿತಿಯನ್ನು ಸಂಬಂಧಪಟ್ಟ ಇಲಾಖೆಗಳಿಂದ ಮಂಡಳಿಯು ಪಡೆಯಬಹುದಾಗಿದೆ. ಅಗತ್ಯತೆಗೆ ಅನುಗುಣವಾಗಿ ಇಲಾಖೆಗಳು ಮಾಹಿತಿಯನ್ನು ರಾಜ್ಯ ಯೋಜನಾ ಮಂಡಳಿಗೆ ಒದಗಿಸುವ ಕ್ರಮ ಕೈಗೊಳ್ಳುವುದು. ರಾಜ್ಯ ಯೋಜನಾ ಮಂಡಳಿಗೆ ಅವಶ್ಯಕತೆಯಿದ್ದಲ್ಲಿ ಇಲಾಖೆಗಳ ಜೊತೆಗೆ ಸಮಾಲೋಚನಾ ಸಭೆಯನ್ನು ನಡೆಸಬಹುದಾಗಿದೆ.

(ವಿ. ಮಂಜುಳ)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ